"ಅಲ್ಲಾ ಪಟ್ಲೆರೆ ತಂತ್ರಿಗಳು ಒಪ್ಪಿದ್ರು ಅಂತಾನೇ ಇಟ್ಕೊಳ್ಳುವ; ಮರ ಕೊಡುದಕ್ಕೆ ಆ ಬ್ಯಾರಿ ಏನಾದ್ರು ಮತ್ತೆ ತಕರಾರು ತೆಗೆದ್ರೆ!? 'ನಮ್ಮ ಹಿತ್ತಲಲ್ಲಿ ಬೆಳೆದದ್ದನ್ನು ನಿಮ್ಮ ದೈವಕ್ಕೆ ಕೊಡುವಾಗ, ನಮ್ಮ ಜಮಾತಿನಲ್ಲೂ ಒಂದು ಮಾತು ಕೇಳ್ಬೇಕಲ್ವಾ' ಅಂತ ಅಂದರೆ ಮುಂದೆ ಏನ್ಮಾಡ್ತೀರಾ ?' ಎಂದು ಶೆಟ್ಟರನ್ನು ಕೇಳಿದಾಗ ದೇವಪ್ಪ ಶೆಟ್ರಿಗೆ ನಿಜಕ್ಕೂ ಪಿಸುರು ಉಕ್ಕಿ ಬಂದಿತ್ತು.

'ನಡಿಯಪ್ಪ ನೀನು... ಕೆಲಸಕ್ಕೆ ಕೈ ಹಾಕುವ ಮೊದಲೇ, ನಿಂದೊಂದು ಅಡ್ಡಮಾತು. ಆದ್ರೆ... ಹೋದ್ರೆ ಅಂತ ಇಲ್ಲೇ ಯೋಚನೆ ಮಾಡುತ್ತ ಕೂತ್ರೆ, ನಮ್ಮ ಕೆಲಸ ಗೂಟ ಹೊಡ್ಕೊಂಡು ಅಲ್ಲೇ ಬಿದ್ದಿರುತ್ತೆ; ಒಂದು ವೇಳೆ ಆ ಬ್ಯಾರಿ ಒಪ್ಪದಿದ್ರೆ... ಆಗ ಬೇರೆ ಕಡೆ ನೋಡಿದರಾಯ್ತು; ನಡಿ ನಡೀ... ಈಗ ವಾಸುತಂತ್ರಿಯವರ ಹಿತ್ತಲಿಗೆ ಹೋಗಿ ಬರುವ.'

ಇಬ್ಬರೂ ಮುಂದಿನ ಕೆಲಸಗಳ ಬಗ್ಗೆ ಅದು ಇದು ಮಾತನಾಡುತ್ತಾ ಕೈನಾಲು ವಾಸುತಂತ್ರಿಗಳ ಅಂಗಳಕ್ಕೇರುವಾಗ ತಂತ್ರಿಗಳು ಮಡಿಯುಟ್ಟು ಪೂಜೆಯಲ್ಲಿದ್ದರು.

ಮಡದಿ ರುಕುಣಿಯಮ್ಮನವರಿಂದ ಇವರಿಬ್ಬರೂ ಅಂಗಳಕ್ಕೆ ಬಂದಿರುವ ಸುದ್ದಿ ತಂತ್ರಿಗಳ ಕಿವಿಗೆ ಬಿದ್ದೊಡನೆ, ತಂತ್ರಿಗಳು ಅವಸರವಸರವಾಗಿ ಪೂಜೆ ಮುಗಿಸಿದವರೆ ಹೊರಬಂದು, 'ಹೋsss ಹೋsss ಏನಂತೆ?... ನಮ್ಮ ಪಟೇಲನದ್ದು ಹೊಸ ಕತೆ? ಮತ್ತೆ ಬಿಳಿಕೇಪಳದ್ದೆ ಸಮಸ್ಯೆನಾ?...' ಎಂದು ಹೇಳಿದೊಡನೆ, ದೇವಪ್ಪ ಶೆಟ್ರು ತೆಳುನಗು ನಕ್ಕವರೆ, ಆದಷ್ಟು ಮೆಲುದನಿಯಲ್ಲಿ ತಮ್ಮ ಸಮಸ್ಯೆಯನ್ನು ಬಿಚ್ಚಿಟ್ಟಿದ್ದರು.

ಪಟೇಲರಿಂದ ಎಲ್ಲವನ್ನೂ ಕೇಳಿಸಿಕೊಂಡ ವಾಸುತಂತ್ರಿಗಳು, 'ಮರ ಎಲ್ಲಿ ಬೆಳೆದ್ರೇನಂತೆ? ಅಂವಕ್ಕೆ ನೀರು, ಗೊಬ್ಬರ ಕೊಡುದು ನಮ್ಮ ದೇವ್ರೆ ಅಲ್ವಾ? ಹಾಗೆ ನೋಡಿದ್ರೆ ಪುರಾಕಲ್ಲಿ(ಪುರಾತನ ಕಾಲದಲ್ಲಿ) ಅವ್ರು ಕೂಡಾ ನಮ್ಮವರೇ ಆಗಿದ್ರು. ನಂತರ ಅವರು ಬ್ಯಾರಿಗಳಾದ್ರು ಅಂತ ನಮ್ಮ ಓದುವ ಪುಸ್ತಕಗಳಲ್ಲೇ ಇದೆ ಅಲ್ವಾ...' ಎಂದು ಅವರು, ತಾವು ಹಿಡಿದಿರುವ ಧರ್ಮದ ಹಗ್ಗವನ್ನೇ ಇನ್ನಷ್ಟು ಜಗ್ಗಿ ಹಿಡಿದರೂ ಕಾದ್ರಿಬ್ಯಾರಿಯವರ ಹಿತ್ತಲ ಮರ ನಮ್ಮ ದೈವಸ್ಥಾನದ 'ಕೊಡಿಮರ'ವಾಗಲು ಅಡ್ಡಿ ಇಲ್ಲವೆಂದು ಒಪ್ಪಿಗೆ ಕೊಟ್ಟೇ ಬಿಟ್ಟಿದ್ದರು. ಹಾಗೆಯೇ 'ವೃಕ್ಷಪೂಜೆ'ಗೆ ಸೂಕ್ತ ದಿನವನ್ನೂ ಕೊಟ್ಟುಬಿಟ್ಟರು.

'ಅಬ್ಬ... ಶುಂಠಿಯ ರಸವಿಲ್ಲದೆ ಕಫ ಕರಗಿತಲ್ಲ' ಎಂಬ ನಿರಾಳ ಭಾವದಿಂದ, ಅವರಿಬ್ಬರೂ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು, ತಂತ್ರಿಗಳಿಗೆ ಧನಕಾಣಿಕೆಯ ಗೌರವವನ್ನು ಕೊಟ್ಟು, ಅವರ ಅಂಗಳದಿಂದ ಹಿಂದಿರುಗುವಾಗಲೇ, ಶ್ರೀಧರಾಚಾರಿಯು ಶೆಟ್ಟರಿಗಂದ :

'ದನಿಗಳೇ... ಹೇಗೂ ಇಲ್ಲಿವರೆಗೆ ಬಂದಿದ್ದೇವೆ; ಇಲ್ಲಿಂದ ಹೀಗೆಯೆ ಸೀದ ನದಿದಂಡೆಯಾಗಿಯೆ ಹೋಗಿ ಕಾದ್ರಿಬ್ಯಾರಿಗಳ ಹಿತ್ತಲು ಹೊಕ್ಕು ಮರದ ಇಚಾರ ಒಮ್ಮೆ ಇತ್ಯರ್ಥ ಮಾಡಿಕೊಂಡು ಬಂದರೆ ಆಗದಾ?' ಎಂದು. ಶೆಟ್ಟರು ತಟ್ಟನೆ ಆತನ ಮಾತಿಗೊಪ್ಪಿದ್ದರು. ಇಬ್ಬರೂ ಹಾಗೆಯೇ ಸುಖಕಷ್ಟ ಮಾತಾಡುತ್ತ ನದಿದಂಡೆಯಾಗಿ ಒಳದಾರಿಯಲ್ಲೆ ಕಾದ್ರಿಬ್ಯಾರಿಯವರ ಹಿತ್ತಲು ಹೊಕ್ಕಿದ್ದರು. 'ನಾಯಿಗೀಯಿ ಏನಾದ್ರೂ ಇರ್ಬಹುದಾ ಮಾರಾಯ್ರೆ ನಮ್ಮ ಗ್ರಹಚಾರಕ್ಕೆ?' ಎಂದನ್ನುತ್ತ ಶ್ರೀಧರಾಚಾರಿಯು ಆತಂಕದಿಂದ ಆಚೀಚೆ ನೋಡಿದಾಗ, ಶೆಟ್ಟರು ಮನಸ್ಸಾರೆ ನಕ್ಕು ಬಿಟ್ಟು,

'ಎಂತ ಮರ್ಲು ಮಾತು ಮಾರಾಯಾ ನಿಂದು? ಬ್ಯಾರಿಗಳು ನಾಯಿ ಸಾಕ್ತಾರೇನು?' ಎಂದು ಹೇಳಿದವರೇ, 'ಈ ಬ್ಯಾರಿಗಳಿಗೂ ನಾಯಿಗೂ ಇರುವ ನಿಷ್ಠುರದ ಬಗ್ಗೆ ನಿಂಗೆ ಒಂದು ಕತೆ ಹೇಳಲೇಬೇಕು ನಾನು' ಎಂದು ಹೇಳುವಷ್ಟರಲ್ಲಿ ಅಂಗಳದಲ್ಲಿ ನಿಂತಿದ್ದ ಕಾದ್ರಿಬ್ಯಾರಿಗಳ ಕಣ್ಣಿಗೆ ಇವರಿಬ್ಬರೂ ಬಿದ್ದುಬಿಟ್ಟಿದ್ದರು.

'...ಅಠ್ರರರೆ... ಏನಪ್ಪ ಇದು!!? ದೇವರೇ ಬೇಡುವವನಲ್ಲಿಗೆ ಬಂದ ಹಾಗಾಯ್ತಲ್ವ ಇದು!...' ಎಂದು ಬಲು ಸಂಭ್ರಮದಲ್ಲೆ ಇಬ್ಬರನ್ನೂ ಎದುರ್ಗೊಂಡು ಮನೆ ಎದುರಿನ ಪಡ್ಸುವಿನ ಮೇಲೆ ಕೂರಿಸಿ, 'ಅಬ್ಬೊ...